ಓ ಎಸ್ ನಂ.113/2023
ಡಿ.ಡಬ್ಲ್ಯೂ-1 ಮಡಿವಾಳಪ್ಪ ತಂದೆ ಶರಣಪ್ಪ ಹೂಗಾರ

**(ಇಂದು ದಿನಾಂಕಃ 22-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಆರ್ ಕೆ ವಕೀಲರಿಂದ.

ನಾನು ಮೊದಲಿನಿಂದ ಅವರಳ್ಳಿ ಗ್ರಾಮದಲ್ಲಿ ವಾಸ ಇರುತ್ತೇನೆ. ನಾನು ಪಿ ಯು ಸಿ ಓದಿರುತ್ತೇನೆ. ನಮ್ಮ ತಂದೆ ಶರಣಪ್ಪರವರು ಸುಮಾರು ೮-೧೦ ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನನ್ನ ಅಜ್ಜನ ಹೆಸರು ಗುರಪ್ಪ ಆಗಿರುತ್ತದೆ. ಗುರಪ್ಪರವರಿಗೆ ೪ ಜನ ಮಕ್ಕಳು ಇರುತ್ತಾರೆ. ಬಸಣ್ಣ ಗುರಪ್ಪರವರ ಮಗ ಎಂದರೆ ಸರಿ. ವಾದಿಯರು ಬಸಣ್ಣರವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ಲಕ್ಷ್ಮಣ ಕೂಡಾ ಗುರುಪ್ಪರವರ ಮಗ ಎಂದರೆ ಸರಿ. ೧ ಮತ್ತು ೨ನೇ ಪ್ರತಿವಾದಿಗಳು ಲಕ್ಷ್ಮಣರವರ ಮಕ್ಕಳು ಎಂದರೆ ಸರಿ.

೨. ನಮ್ಮ ತಂದೆ ಶರಣಪ್ಪರವರು ಬೇರೆ ಕುಟುಂಬಕ್ಕೆ ದತ್ತಕ ಹೋಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಬಸಣ್ಣರವರು ದತ್ತಕ ಹೋಗಿದ್ದರು ಎನ್ನುತ್ತಾರೆ. ನನ್ನ ಅಜ್ಜ ಗುರಪ್ಪರವರಿಗೆ ಯಾವುದೆ ಆಸ್ತಿಗಳು ಇರಲಿಲ್ಲ. ಗುರಪ್ಪರವರ ೪ ಜನ ಮಕ್ಕಳಿಗೆ ಇರುವ ಆಸ್ತಿಗಳ ಬಗ್ಗೆ ನನಗೆ ಗೊತ್ತು. ನಮ್ಮ ತಂದೆ ಶರಣಪ್ಪರವರಿಗೆ ಯಾವುದೆ ಆಸ್ತಿಗಳು ಇರುವುದಿಲ್ಲ. ನನಗೆ ಈರಣ್ಣ, ಮಹಾಂತ, ದತ್ತು ಎಂಬ ಸಹೋದರರು ಇರುತ್ತಾರೆ.

೩. ಅವರಳ್ಳಿ ಗ್ರಾಮದಲ್ಲಿ ನನ್ನ ಹೆಸರಿನಲ್ಲಿ ಸರ್ವೆ ನಂಬರ ೫೪ ರಲ್ಲಿ ೨ ಎಕರೆ ೩೨ ಗುಂಟೆ ಜಮೀನು ಇರುತ್ತದೆ. ಸಾಕ್ಷಿಯು ಅದನ್ನು ನಾನು ಖರೀದಿ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ಜಮೀನನ್ನು ಸುಮಾರು ೨೦ ವರ್ಷಗಳ ಹಿಂದೆ ನಾನು ಖರೀದಿಸಿರುತ್ತೇನೆ.

ಸದರಿ ಜಮೀನು ನಾನು ಸ್ವಂತ ಗಳಿಸಿದ ಆದಾಯದಿಂದ ಖರೀದಿಸಿರುತ್ತೇನೆ. ನನ್ನ ಅಣ್ಣತಮ್ಮಂದಿರ ಹೆಸರಿನಲ್ಲೂ ಕೂಡಾ ಜಮೀನುಗಳು ಇರುತ್ತವೆ. ಸರ್ವೆ ನಂಬರ ೧೧೩ ರಲ್ಲಿ ಈರಣ್ಣರವರ ಹೆಸರಿನಲ್ಲಿ ೩ ಎಕರೆ ೭ ಗುಂಟೆ ಮತ್ತು ಮಹಾಂತರವರ ಹೆಸರಿನಲ್ಲಿ ೩ ಎಕರೆ ೭ ಗುಂಟೆ ಮತ್ತು ನನ್ನ ಹೆಸರಿನಲ್ಲಿ ೩ ಎಕರೆ ೭ ಗುಂಟೆ ಮತ್ತು ದತ್ತುರವರ ಹೆಸರಿನಲ್ಲಿ ೩ ಎಕರೆ ೬ ಗುಂಟೆ ಜಮೀನು ಇರುತ್ತದೆ. ಸರ್ವೆ ನಂಬರ ೧೧೩ ರ ಜಮೀನನ್ನು ನಾವು ೪ ಜನ ಅಣ್ಣತಮ್ಮಂದಿರು ಸೇರಿ ನಮ್ಮ ಅಣ್ಣ ಈರಣ್ಣರವರ ಹೆಸರಿನಲ್ಲಿ ಖರೀದಿ ಮಾಡಿರುತ್ತೇವೆ. ಸುಮಾರು ೧೮ ವರ್ಷಗಳ ಹಿಂದೆ ಸರ್ವೆ ನಂಬರ ೧೧೩ ರ ಜಮೀನನ್ನು ಖರೀದಿಸಿರುತ್ತೇವೆ. ಸದರಿ ಜಮೀನುಗಳನ್ನು ಖರೀದಿಸುವಾಗ ನಮ್ಮ ತಂದೆ ಜೀವಿತಾ ಇದ್ದರು. ಸಾಕ್ಷಿಯು ನಮಗೆ ಅವರು ಬೇರೆ ಮಾಡಿಕೊಟ್ಟ ನಂತರ ನಾವು ಸದರಿ ಜಮೀನುಗಳನ್ನು ಖರೀದಿಸಿರುತ್ತೇವೆ ಎನ್ನುತ್ತಾರೆ. ನಮ್ಮ ತಾಯಿ ನಮ್ಮ ತಂದೆಗಿಂತ ಮೊದಲೆ ಮೃತರಾಗಿರುತ್ತಾರೆ. ಸದರಿ ೨ ಜಮೀನುಗಳನ್ನು ಖರೀದಿಸುವಾಗ ನಮ್ಮ ತಾಯಿ ಜೀವಿತಾ ಇದ್ದರು.

೪. ಗುರಪ್ಪರವರಿಗೆ ಶಂಕ್ರಪ್ಪ ಕೂಡಾ ಮಗ ಎಂದರೆ ಸರಿ. ಶಂಕ್ರಪ್ಪರವರ ಹೆಂಡತಿ ಸುಭದ್ರಬಾಯಿರವರು ೨೦೧೦ ರಲ್ಲಿ ಮೃತರಾಗಿರುತ್ತಾರೆ. ಶಂಕ್ರಪ್ಪರವರು ದಿನಾಂಕ 14-09-2017 ರಂದು ಮೃತರಾಗಿರುತ್ತಾರೆ. ಶಂಕ್ರಪ್ಪರವರಿಗೆ ಮಕ್ಕಳು ಇರುವುದಿಲ್ಲ. ಶಂಕ್ರಪ್ಪ ಮತ್ತು ಅವರ ಹೆಂಡತಿ ಜೀವಿತಾ ಇದ್ದಾಗ ಅವರು ಅವರ ಸಹೋದರರಾದ ನಮ್ಮ ತಂದೆ ಮತ್ತು ಬಸಣ್ಣ ಮತ್ತು ಲಕ್ಷ್ಮಣರವರ ಮನೆಗೆ ಹೋಗಿ-ಬಂದು ಮಾಡುತ್ತಿದ್ದರು.

೫. ದಾವಾ ಜಮೀನು ಸರ್ವೆ ನಂಬರ ೧೪/೧ ರ ೭ ಎಕರೆ ಜಮೀನಿನ ಮೂಲ ಮಾಲೀಕರು ಅಂಬವ್ವ ಎಂದರೆ ಸರಿ. ಸಾಕ್ಷಿಯು ಅಂಬವ್ವರವರಿಂದ ಶಂಕರವರು ೧೯೮೦-೮೧ ರಲ್ಲಿ ಜಮೀನು ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ಜನ್ಮ ದಿನಾಂಕ 20-10-1975

ಆಗಿರುತ್ತದೆ. ಅಂಬವ್ವರವರು ದಾವಾ ಜಮೀನಿನ ಕುರಿತು ಲಕ್ಷ್ಮಣರವರಿಗೆ ಖರೀದಿ ಕರಾರು ಪತ್ರ ಮಾಡಿಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಅಂಬವ್ವರವರು ಲಕ್ಷ್ಮಣರವರಿಗೆ ಬರೆದುಕೊಟ್ಟ ಖರೀದಿ ಕರಾರುಪತ್ರದ ಬಗ್ಗೆ ನೀವು ಗುರಪ್ಪರವರ ಮಕ್ಕಳನ್ನು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಶಂಕರವರು ಸದರಿ ಜಮೀನನ್ನು ಖರೀದಿ ಮಾಡಿರುತ್ತಾರೆ, ಅವರ ಅದನ್ನು ವಿಚಾರ ಮಾಡಬೇಕು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

೬. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ೧ನೇ ಪ್ರತಿವಾದಿ ಶಂಕ್ರಪ್ಪರವರ ವಿರುದ್ದ ಓ ಎಸ್ ನಂಬರ ೧೦೯/೨೦೧೦ ರ ದಾವೆ ಹಾಕಿದ್ದರು. ಸದರಿ ದಾವೆಯ ತೀರ್ಪಿನಲ್ಲಿ ಅಂಬವ್ವರವರು ಲಕ್ಷ್ಮಣರವರಿಗೆ ಖರೀದಿ ಕರಾರುಪತ್ರ ಬರೆದ ವಿಚಾರವಾಗಿ ಉಲ್ಲೇಖ ಇರುತ್ತದೆ ಎಂದರೆ ಸರಿಯಲ್ಲ. ೧ನೇ ಪ್ರತಿವಾದಿ ಸದರಿ ಖರೀದಿ ಕರಾರು ಪತ್ರವನ್ನು ಸದರಿ ದಾವೆಯಲ್ಲಿ ಹಾಜರುಮಾಡಿದ್ದರು ಎಂದರೆ ಸರಿಯಲ್ಲ. ಮೇಲ್ಮನವಿ ತೀರ್ಪಿನಲ್ಲೂ ಕೂಡಾ ಸದರಿ ಖರೀದಿ ಕರಾರುಪತ್ರದ ಬಗ್ಗೆ ಉಲ್ಲೇಖ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ತೀರ್ಪುಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ.

೭. ನಿಡಿ-೧೩ ಮೃತ್ಯುಪತ್ರದ ಮೂಲ ದಾಖಲೆ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ದೃಡಿಕೃತ ನಕಲನ್ನೆ ನೀಡಿರುತ್ತಾರೆ ನಾನು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನಿಡಿ-೧೩ ನ್ನು ಬಿಟ್ಟು ನಿಮ್ಮ ಹತ್ತಿರ ಮೃತ್ಯುಪತ್ರ ಮೂಲ ದಾಖಲೆ ಇರುತ್ತದೆಯೆ ಎಂದರೆ ಸಾಕ್ಷಿಯು ನನ್ನ ಹತ್ತಿರ ನಾನು ಹಾಜರುಪಡಿಸಿದ ನಿಡಿ-೧೩ ಮೃತ್ಯುಪತ್ರದ ದೃಡಿಕೃತ ನಕಲು ಮಾತ್ರ ಇರುತ್ತದೆ ಎನ್ನುತ್ತಾರೆ. ಮೃತ್ಯುಪತ್ರದ ಮೂಲ ಪ್ರತಿ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿರುತ್ತದೆ, ಅದು ನನ್ನ ಹತ್ತಿರ ಇರುವುದಿಲ್ಲ.

೨೦೧೫ ರಲ್ಲಿ ಮೃತ್ಯುಪತ್ರ ಮಾಡಲಾಗಿದೆ ಅದು ೨೦೧೭-೧೮ ರಲ್ಲಿ ಜಾರಿಗೆ ಬಂದಿರುತ್ತದೆ. ೨೦೧೫ ರಿಂದ ಮೂಲ ಮೃತ್ಯುಪತ್ರ ಉಪನೋಂದಣಾಧಿಕಾರಿಗಳ ಹತ್ತಿರವೆ ಇರುತ್ತದೆ. ಮೃತ್ಯುಪತ್ರದ ಮೂಲ ಪ್ರತಿ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಇರುವ ಕುರಿತು ನಿಮ್ಮ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ನಿಡಿ-೧೩ ರ ದೃಡಿಕೃತ ನಕಲಿನ ಕುರಿತು ತಿಳಿಸಿರುತ್ತೇನೆ ಎನ್ನುತ್ತಾರೆ.

೮. ನಾನು ಮೂಲ ಪ್ರತಿಯನ್ನು ನೀಡುವಂತೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಕೇಳಿದಾಗ ನನಗೆ ನಿಡಿ-೧೩ ರ ದಾಖಲೆಯನ್ನೆ ನೀಡಿರುತ್ತಾರೆ. ನಾನು ಉಪನೋಂದಣಾಧಿಕಾರಿಗಳಿಗೆ ಮೂಲ ಮೃತ್ಯುಪತ್ರ ನೀಡುವಂತೆ ನೀಡಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನನಗೆ ನಿಡಿ-೧೩ ನ್ನು ಮಾತ್ರ ನೀಡಿರುತ್ತಾರೆ ಎನ್ನುತ್ತಾರೆ. ಮೃತ್ಯುಪತ್ರವನ್ನು ಯಾರು ಟೈಪ್ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಅದು ಶಂಕ್ರಪ್ಪರವರಿಗೆ ಗೊತ್ತು ಎನ್ನುತ್ತಾರೆ. ನಿಡಿ-೧೩ ರಲ್ಲಿ ಯಾರು ಅದನ್ನು ಟೈಪ್ ಮಾಡಿರುತ್ತಾರೆ ಎಂದು ಬರೆದ ಬಗ್ಗೆ ನನಗೆ ಗೊತ್ತಿಲ್ಲ, ಅದು ಶಂಕ್ರಪ್ಪರವರಿಗೆ ಗೊತ್ತು.

೯. ಮೃತ್ಯುಪತ್ರವನ್ನು ಪ್ರಭುಲಿಂಗ ದೇವರಮನಿರವರು ತಯಾರಿಸಿದ ಬಗ್ಗೆ ಅದರಲ್ಲಿ ನಮೂದಿಸಲಾಗಿದೆ. ನಾನು ಮೃತ್ಯುಪತ್ರದ ವಿಚಾರ ತಿಳಿದುಕೊಂಡ ಮೇಲೆ ಸದರಿ ಪ್ರಭುಲಿಂಗ ದೇವರಮನಿರವರಿಗೆ ಭೇಟಿ ಆಗಿರುವುದಿಲ್ಲ. ಮೃತ್ಯುಪತ್ರದಲ್ಲಿ ಸಾಕ್ಷಿದಾರರಾಗಿ ಸಿದ್ದುಗೌಡ ತಂದೆ ನಿಂಗಣ್ಣಗೌಡ ಮಾಲೀ ಪಾಟೀಲ್ ಮತ್ತು ಚಂದ್ರು ತಂದೆ ಬಸವರಾಜ ಯರಗಲ್ ಇರುತ್ತಾರೆ. ಮೃತ್ಯುಪತ್ರದಲ್ಲಿ ಬರೆದ ಸಾಕ್ಷಿದಾರರ ಹೆಸರು ಮೃತ್ಯುಪತ್ರ ನೋಡಿದ ಮೇಲೆ ನನಗೆ ಗೊತ್ತಾಗಿರುತ್ತದೆ. ಸದರಿ ಸಾಕ್ಷಿದಾರರಿಗೆ ನಾನು ಇಲ್ಲಿಯವರೆಗೆ ಹೋಗಿ

ಭೇಟಿಯಾಗಿರುವುದಿಲ್ಲ. ನಿಡಿ-೧೩ ರ ಮೃತ್ಯುಪತ್ರದಲ್ಲಿ ಯಾವುದೆ ಸಹಿಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಸಹಿಗಳು ಇರುತ್ತವೆ ಎನ್ನುತ್ತಾರೆ. ಮೃತ್ಯುಪತ್ರದಲ್ಲಿ ನನ್ನ ಸಹಿ ಇರುವುದಿಲ್ಲ.

೧೦. ನಿಡಿ-೧೩ ಮೃತ್ಯುಪತ್ರ ಜಿಲ್ಲಾ ಉಪನೋಂದಣಾಧಿಕಾರಿಗಳು ಕಲಬುರಗಿರವರ ಕಛೇರಿಯಲ್ಲಿ ಆಗಿರುತ್ತದೆ. ನಾನು ಅಲ್ಲಿಂದಲೆ ನಿಡಿ-೧೩ ಮೃತ್ಯುಪತ್ರದ ದೃಡಿಕೃತ ನಕಲನ್ನು ತಂದಿರುತ್ತೇನೆ. ಅಫಜಲಪೂರ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಯಾಕೆ ಮೃತ್ಯುಪತ್ರ ಮಾಡಿಸಿಲ್ಲ ಎಂದು ನನಗೆ ಗೊತ್ತಿಲ್ಲ, ಅದು ಶಂಕ್ರಪ್ಪರವರಿಗೆ ಗೊತ್ತು. ಮೃತ್ಯುಪತ್ರ ಮಾಡುವಾಗ ನಾನು ಹಾಜರು ಇರಲಿಲ್ಲ. ನಾನು ಮೃತ್ಯುಪತ್ರದ ಸಮಯದಲ್ಲಿ ನಮ್ಮ ಊರಾದ ಅವರಳ್ಳಿಯಲ್ಲಿ ಇದ್ದೆ. ಶಂಕ್ರಪ್ಪರವರು ಮೃತ್ಯುಪತ್ರ ಮಾಡಿದ ವಿಚಾರ ಶಂಕ್ರಪ್ಪರವರು ಮೃತರಾದ ನಂತರ ನನಗೆ ಗೊತ್ತಾಗಿರುತ್ತದೆ. ೨೦೧೫ ರಲ್ಲಿ ಶಂಕ್ರಪ್ಪರವರು ಮೃತ್ಯುಪತ್ರ ಮಾಡಿರುತ್ತಾರೆ ಮತ್ತು ಅವರು ೨೦೧೭ ರಲ್ಲಿ ಮೃತರಾಗಿರುತ್ತಾರೆ. ಶಂಕ್ರಪ್ಪರವರು ತಮ್ಮ ಹತ್ತಿರ ಚೀಟಿ ಇಟ್ಟುಕೊಂಡಿದ್ದರು, ಅವರು ಮೃತರಾದ ನಂತರ ಆ ಚೀಟಿ ನೋಡಿದಾಗ ಮೃತ್ಯುಪತ್ರದ ವಿಚಾರ ನನಗೆ ಗೊತ್ತಾಗಿರುತ್ತದೆ.

೧೧. ಶಂಕ್ರಪ್ಪರವರು ಅವರಳ್ಳಿಯಲ್ಲಿ ಮೃತರಾಗಿರುತ್ತಾರೆ. ಅವರ ಅಂತ್ಯಕ್ರಿಯೆಯನ್ನು ಅವರಳ್ಳಿಯ ನನ್ನ ಜಮೀನಿನಲ್ಲಿಯೆ ಮಾಡಿರುತ್ತೇನೆ. ಸದರಿ ವಿಚಾರಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ ಬಗ್ಗೆ ನನಗೆ ಗೊತ್ತಿಲ್ಲ. ಶಂಕ್ರಪ್ಪರವರು ತಮ್ಮ ಸೊಂಟದಲ್ಲಿ ಚೀಟಿ ಇಟ್ಟುಕೊಂಡಿದ್ದರು. ಸದರಿ ಚೀಟಿಯನ್ನು ತೆಗೆಯುವ ಸಮಯದಲ್ಲಿ ಲಕ್ಷ್ಮಣ ಮತ್ತು ಬಸಣ್ಣರವರ ಮಕ್ಕಳು ಇರಲಿಲ್ಲ. ಸಾಕ್ಷಿಯು ಅವರು ನಂತರ ಬಂದಿರುತ್ತಾರೆ ಎನ್ನುತ್ತಾರೆ.

೧೨. ಮೃತ್ಯುಪತ್ರದದಲ್ಲಿ ಅಂಬವ್ವರವರು ಲಕ್ಷ್ಮಣರವರಿಗೆ ಬರೆದ ಕರಾರುಪತ್ರದ ಕುರಿತು ಉಲ್ಲೇಖ ಇರುತ್ತದೆಯೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಾನು ಮೃತ್ಯುಪತ್ರದಲ್ಲಿ ತಿಳಿಸಿದ ದಾವಾ ಆಸ್ತಿಯ ಕುರಿತು ಋಣಭಾರ ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ.

೧೩. ನಾನು ಹೇಳಿದ ಚೀಟಿ ಉಪನೋಂದಣಾಧಿಕಾರಿಗಳು ನೀಡಿದ ರಶೀದಿ ಆಗಿತ್ತು. ಸದರಿ ರಶೀದಿಯನ್ನು ನಾನು ಉಪನೋಂದಣಾಧಿಕಾರಿಗಳ ಕಛೇರಿಗೆ ಕೊಟ್ಟ ನಂತರ ನನಗೆ ಅವರು ನಿಡಿ-೧೩ ದಾಖಲೆಯನ್ನು ನೀಡಿರುತ್ತಾರೆ. ಸದರಿ ರಶೀದಿ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಇರುತ್ತದೆಯೆ ಎಂದರೆ ಸಾಕ್ಷಿಯು ಹೌದು ಅದರ ನಕಲು ನನ್ನ ಹತ್ತಿರ ಇರುತ್ತದೆ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.